ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ–583 276, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ

ಸಂಖ್ಯೆ:ಕವಿಹಂ:ದೂಶಿನಿ:17:ಪರೀಕ್ಷೆ:2022:ಸೂಚನೆ:2023–24 ದಿನಾಂಕ.04.12.2023

ವಿದ್ಯಾರ್ಥಿಗಳ ಪರಿಷ್ಕೃತ ಪರೀಕ್ಷಾ ಸೂಚನಾ ಪತ್ರ

2023–24ನೇ ಸಾಲಿನಲ್ಲಿ ದೂರಶಿಕ್ಷಣ ನಿರ್ದೇಶನಾಲಯವು ನಡೆಸುವ **2021–22ನೇ ಸಾಲಿನ ಎಂ.ಎ. ಪ್ರಥಮ ಹಾಗೂ ಅಂತಿಮ ವರ್ಷದ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಗಳನ್ನು ದಿನಾಂಕ:05.02.2024** ರಿಂದ **ದಿನಾಂಕ:09.02.2024**ರವರೆಗೆ ನಡೆಸಲು ಪರಿಷ್ಕೃತ ವೇಳಾಪಟ್ಟಿ ಹೊರಡಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, **ಪರೀಕ್ಷೆಗಳನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಕೇಂದ್ರದಲ್ಲಿ ಮಾತ್ರ ಹಮ್ಮಿಕೊಳ್ಳಲಾಗಿದ್ದು,** ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಈ ಕೆಳಗಿನ ಪರೀಕ್ಷಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

1. **ಪ್ರಥಮ ವರ್ಷ**ದ ಎಂ.ಎ. ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ) ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಗಳು **ದಿನಾಂಕ:05.02.2024** ರಿಂದ **ದಿನಾಂಕ:09.02.2024**ರ ವರೆಗೆ **ಬೆಳಗ್ಗೆ 10.30 ರಿಂದ 1.30ರವರೆಗೆ** ನಡೆಯುತ್ತವೆ.
2. **ಅಂತಿಮ ವರ್ಷ**ದ ಎಂ.ಎ. ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ) ವಿದ್ಯಾರ್ಥಿಗಳಿಗೆ **ಮಧ್ಯಾಹ್ನ 2.30 ರಿಂದ 5.30ರವರೆಗೆ** ಪರೀಕ್ಷೆಗಳು ನಡೆಯುತ್ತವೆ.
3. ದೂರಶಿಕ್ಷಣ ನಿರ್ದೇಶನಾಲಯದ ಮಾನ್ಯತಾ ಕೇಂದ್ರ ಮತ್ತು ಸಮನ್ವಯ ಘಟಕಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳೂ ವಿದ್ಯಾರಣ್ಯ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆ ಬರೆಯಬೇಕು. ಮಾನ್ಯತಾ ಕೇಂದ್ರ ಮತ್ತು ಸಮನ್ವಯ ಘಟಕಗಳಲ್ಲಿ ಪರೀಕ್ಷೆಗಳು ನಡೆಯುವುದಿಲ್ಲ.
4. 2018–19ನೇ ಸಾಲಿನಲ್ಲಿ ಪ್ರವೇಶ ಪಡೆದಿರುವ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಇದು ಕೊನೆಯ ಅವಕಾಶವಾಗಿರುತ್ತದೆ.
5. ಪರೀಕ್ಷಾ ಅರ್ಜಿ ಸಲ್ಲಿಸಲು ಯಾವುದೇ ದಂಡ ಶುಲ್ಕವಿರುವುದಿಲ್ಲ.
6. ಸಂಪ್ರಬಂಧ ಸಲ್ಲಿಸುವ ವಿದ್ಯಾರ್ಥಿಗಳು ನಿಗಧಿತ ಶುಲ್ಕ ರೂ.500/– ಹಾಗೂ ವಿಳಂಭವಾಗಿ ಸಂಪ್ರಬಂಧ ಸಲ್ಲಿಸುವ ವಿದ್ಯಾರ್ಥಿಗಳು ನಿಗಧಿತ ಶುಲ್ಕದೊಂದಿಗೆ ದಂಡ ಶುಲ್ಕ ಒಂದು ವರ್ಷದ ಹಿಂದಿನವರಿಗೆ ರೂ.600/–, ಎರಡು ವರ್ಷ ಅಥವಾ ಅದಕ್ಕಿಂತ ಹಿಂದಿನವರಿಗೆ ರೂ.1000/–ಗಳನ್ನು ಪಾವತಿಸಬೇಕು.
7. ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಕೇಂದ್ರದಲ್ಲಿ ನೋಂದಣಿ ಪಡೆದಿರುವ ವಿದ್ಯಾರ್ಥಿಗಳು ಪ್ರವೇಶಪತ್ರಗಳನ್ನು ಖುದ್ದಾಗಿ ಬಂದು ದೂರಶಿಕ್ಷಣ ನಿರ್ದೇಶನಾಲಯದಿಂದ ಪಡೆದುಕೊಳ್ಳುವುದು.
8. ಪ್ರವೇಶ ಪತ್ರಗಳನ್ನು ಪಡೆಯುವಾಗ ವಿದ್ಯಾರ್ಥಿಗಳು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.
9. ಪರೀಕ್ಷಾ ಕೊಠಡಿಯಲ್ಲಿ ಅರ್ಧ ಗಂಟೆ ಮುಂಚಿತವಾಗಿ ಹಾಜರಾಗುವುದು.
10. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪರೀಕ್ಷೆಗಳು ಮುಗಿಯುವವರೆಗೆ ಪ್ರವೇಶ ಪತ್ರದ ಜೊತೆಗೆ ಗುರುತಿನ ಚೀಟಿಯನ್ನು ಇಟ್ಟುಕೊಳ್ಳುವುದು ಮತ್ತು ಪರಿಶೀಲಕರು ಪರಿಶೀಲನೆಗೆ ಬಂದಾಗ ಪ್ರವೇಶ ಪತ್ರದ ಜೊತೆಗೆ ಗುರುತಿನ ಚೀಟಿಯನ್ನು ತೋರಿಸಬೇಕು.
11. ಯಾವುದೇ ಪುಸ್ತಕ ಅಥವಾ ಅದರ ಪುಟಗಳನ್ನು, ನೋಟ್‌ಬುಕ್ಕನ್ನು, ಕಚ್ಚಾ ಅಥವಾ ಕೈಬರಹದ ಹಾಳೆಗಳನ್ನು, ಇತರ ನಿರ್ಬಂಧಿತ ಸಾಮಗ್ರಿಗಳನ್ನು ಪರೀಕ್ಷಾ ಕೊಠಡಿಯಲ್ಲಿ ತರುವುದು ನಿಷಿದ್ಧ. ಅಂಥ ಯಾವುದೇ ವಸ್ತುಗಳನ್ನು ಪರೀಕ್ಷಾ ಸಮಯದಲ್ಲಿ ಇಟ್ಟುಕೊಳ್ಳಬಾರದು.
12. ಬರವಣಿಗೆಯ ಯಾವುದೇ ಸಾಮಗ್ರಿಗಳನ್ನು ಪರಸ್ಪರ ವರ್ಗಾಯಿಸಿಕೊಳ್ಳಬಾರದು.
13. ಪರೀಕ್ಷಾ ವೇಳೆಯಲ್ಲಿ ಬೇರೆ ಪರೀಕ್ಷಾರ್ಥಿಯೊಂದಿಗೆ ಮಾತನಾಡುವುದು ಅಥವಾ ಬೇರಾವುದೇ ವಿಧದಲ್ಲಿ ಸಂಪರ್ಕಿಸಬಾರದು.
14. ಬರೆದ ಅಥವಾ ಖಾಲಿ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೊಠಡಿಯಿಂದ ಹೊರಡುವಾಗ ಪರೀಕ್ಷಾರ್ಥಿಯು ಜೊತೆಗೆ ತೆಗೆದುಕೊಂಡು ಹೋಗಬಾರದು. ಬರೆದ ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸುವುದು ವಿದ್ಯಾರ್ಥಿಯ ಕರ್ತವ್ಯವಾಗಿರುತ್ತದೆ. ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೊಠಡಿಯಿಂದ ತೆಗೆದುಕೊಂಡು ಹೋದಲ್ಲಿ ಪರೀಕ್ಷಾ ನಿಯಮಾವಳಿ ಹಾಗೂ ಸರ್ಕಾರದ ಆದೇಶಗಳನುಸಾರ ಕ್ರಮ ಜರುಗಿಸಲಾಗುವುದು.
15. ಬೇರೆಯವರಿಂದ ಸಹಾಯ ಪಡೆಯುವುದು, ಸಹಾಯ ಮಾಡುವುದು ಅಥವಾ ಮಾಡಲು ಪ್ರಯತ್ನಿಸುವುದು. ಪುಸ್ತಕ, ಹಸ್ತಪ್ರತಿ, ಟಿಪ್ಪಣಿ ಇತ್ಯಾದಿಗಳ ಮೂಲಕ ನಕಲು ಮಾಡಬಾರದು ಅಥವಾ ನಕಲು ಮಾಡಲು ಪ್ರಯತ್ನಿಸಬಾರದು, ಬೇರೆಯವರಿಗೆ ತಮ್ಮ ಉತ್ತರ ಪತ್ರಿಕೆಯನ್ನು ನಕಲು ಮಾಡಲು ಅವಕಾಶ ಕೊಡಬಾರದು.
16. ಪರೀಕ್ಷೆಯಲ್ಲಿ ಯಾವುದೇ ಪರೀಕ್ಷಾರ್ಥಿಗೆ ಅನುಕೂಲವಾಗಬಹುದಾದ ಸಂಜ್ಞೆ, ಸೂಚನೆಗಳನ್ನು ಕಾಗದದ ಮೇಲೆ ಇಲ್ಲವೇ ಇನ್ನಿತರ ಯಾವುದೇ ವಸ್ತುಗಳ ಮೇಲೆ ಬರೆಯಬಾರದು.

ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583 276, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ

17. ಹೊರಗೆ ಬರೆದು ಸಿದ್ಧಪಡಿಸಿದ ಉತ್ತರ ಪತ್ರಿಕೆಯನ್ನು ಕಳ್ಳತನದಿಂದ ಪರೀಕ್ಷಾ ಕೊಠಡಿಯಲ್ಲಿ ಸಾಗಿಸುವಂಥ ಹಾಗೂ ಪರೀಕ್ಷಾ ಕೋಣೆಯಲ್ಲಿ ಒದಗಿಸದಿದ್ದ ಕಾಗದಗಳನ್ನಾಗಲೀ, ಬದಲಿ ಉತ್ತರ ಪತ್ರಿಕೆಗಳನ್ನಾಗಲೀ ಮೂಲ ಉತ್ತರ ಪತ್ರಿಕೆಯೊಂದಿಗೆ ಲಗತ್ತಿಸುವಂಥ ಅಥವಾ ಲಗತ್ತಿಸಲು ಪ್ರಯತ್ನಿಸುವಂಥ ಅಸಮಂಜಸ ಮಾರ್ಗ ಅನುಸರಿಸಬಾರದು. ಇದು ಕಾನೂನು ರೀತ್ಯಾ ಅಪರಾಧವಾಗಿರುತ್ತದೆ.
18. ತನ್ನ ಹೆಸರಿನಲ್ಲಿ ಬೇರೆಯವರನ್ನು ಪರೀಕ್ಷೆಗೆ ಕೂಡಿಸುವುದು ಅಥವಾ ತಾನು ಬೇರೆಯವರ ಹೆಸರಿನಲ್ಲಿ ಪರೀಕ್ಷೆ ಬರೆಯುವುದು ಕಾನೂನು ರೀತ್ಯಾ ಅಪರಾಧವಾಗುತ್ತದೆ.
19. ಪರೀಕ್ಷಾ ಕೊಠಡಿಯಲ್ಲಿಯ ಮೇಲ್ವಿಚಾರಕರನ್ನು, ಪರೀಕ್ಷಾ ಸಿಬ್ಬಂದಿಯವರನ್ನು, ನಾಲ್ಕನೇ ದರ್ಜೆ ನೌಕರರನ್ನು ಅಥವಾ ವಿಶ್ವವಿದ್ಯಾಲಯದ ಮತ್ತು ಕಾಲೇಜುಗಳ ಅಧಿಕಾರಿ ವರ್ಗದವರನ್ನು ಪರೀಕ್ಷೆಯಲ್ಲಿ ಅಕ್ರಮ ಸೌಲಭ್ಯಕ್ಕಾಗಿ ವಿನಂತಿಸಬಾರದು, ಮನವಿ ಮಾಡಬಾರದು, ಬೆದರಿಕೆ ಹಾಕಬಾರದು ಹಾಗೂ ಆಸೆ ತೋರಿಸಬಾರದು.
20. ವಿದ್ಯಾರ್ಥಿಯು ಈ ಮೇಲಿನ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಇದನ್ನು 'ಅಪರಾಧ'ವೆಂದು ಪರಿಗಣಿಸಲಾಗುವುದು.
21. ಯಾವುದೇ ಕಾನೂನು ವಿವಾದಗಳು ವಿಜಯನಗರ ಜಿಲ್ಲೆಯ ಹೊಸಪೇಟೆ ನಗರದ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಒಳಪಡುತ್ತವೆ.
22. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ತಮ್ಮ ಊಟ ಮತ್ತು ವಸತಿಯನ್ನು ತಾವೇ ವ್ಯವಸ್ಥೆ ಮಾಡಿಕೊಳ್ಳಬೇಕು.
23. ಪರೀಕ್ಷೆ ನಡೆಯುವ ದಿನಗಳು ಮತ್ತು ಕೋರ್ಸ್‌ಗಳ ವಿವರಗಳು

ದಿನಾಂಕ	ಸಮಯ	ಕೋರ್ಸ್‌ಗಳು
05.02.2024 ರಿಂದ 09.02.2024	10.30 ರಿಂದ 1.30 ವರೆಗೆ	ಕನ್ನಡ ಎಂ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳು ಚರಿತ್ರೆ ಎಂ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳು ಸಮಾಜಶಾಸ್ತ್ರ ಎಂ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.) ಪ್ರಥಮ ವರ್ಷದ ವಿದ್ಯಾರ್ಥಿಗಳು
ದಿನಾಂಕ	**ಸಮಯ**	**ಕೋರ್ಸ್‌ಗಳು**
05.02.2024 ರಿಂದ 09.02.2024	2.30 ರಿಂದ 5.30 ವರೆಗೆ	ಕನ್ನಡ ಎಂ.ಎ. ಅಂತಿಮ ವರ್ಷದ ವಿದ್ಯಾರ್ಥಿಗಳು ಚರಿತ್ರೆ ಎಂ.ಎ. ಅಂತಿಮ ವರ್ಷದ ವಿದ್ಯಾರ್ಥಿಗಳು ಸಮಾಜಶಾಸ್ತ್ರ ಎಂ.ಎ. ಅಂತಿಮ ವರ್ಷದ ವಿದ್ಯಾರ್ಥಿಗಳು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.) ಅಂತಿಮ ವರ್ಷದ ವಿದ್ಯಾರ್ಥಿಗಳು

24. ವಿದ್ಯಾರ್ಥಿಯು ಹೆಚ್ಚಿನ ಮಾಹಿತಿಗಳನ್ನು ಅಧ್ಯಯನ ಕೇಂದ್ರಗಳು ಅಥವಾ ದೂರಶಿಕ್ಷಣ ನಿರ್ದೇಶನಾಲಯದ ಮೊ.8792219968, ವಿಶ್ವವಿದ್ಯಾಲಯದ ವೆಬ್‌ಸೈಟ್ www.kannadauniversity.orgನ್ನು ಸಂಪರ್ಕಿಸಬಹುದು.

5/12/23

ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ